ವಿಷಯ : ಮೈಸೂರಿನ ರಾಜೇಂದ್ರ ನಗರದ ಕುರಿಮಂಡಿ ಬ್ಲಾಕ್‌ನಲ್ಲಿ ವಾಸಮಾಡುತ್ತಿರುವ ದಲಿತರು ಮತ್ತು ಪೌರಕಾರ್ಮಿಕರ ವಿಚಾರ

144 (1374)-ಶ್ರೀ ಇ. ಮಾರುತಿರಾವ್ ಪವಾರ್, (ನರಸಿಂಹರಾಜು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಮೈಸೂರಿನ ರಾಜೇಂದ್ರ ನಗರದ ಕುರಿಮಂಡಿ ಬ್ಲಾಕಿನಲ್ಲಿ ವಾಸಮಾಡುತ್ತಿರುವ ದಲಿತರು ಮತ್ತು ಪೌರಕಾರ್ಮಿಕರಿಗೆ ನಗರ ಪಾಲಿಕೆ ವತಿಯಿಂದ ಕಟ್ಟಡಗಳನ್ನು ಪ್ರಾರಂಭಿಸಿ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣಗಳೇನು?

2. ಕುರಿಮಂಡಿ ಬ್ಲಾಕ್‌ನಲ್ಲಿ 126 ಕುಟುಂಬಗಳು ವಾಸವಾಗಿದ್ದು ನಗರ ಪಾಲಿಕೆ ವತಿಯಿಂದ 72 ಮನೆಗಳು ನಿರ್ಮಿಸಿದ್ದು, ಉಳಿಕೆ 54 ಮಂದಿಗೆ ಕಟ್ಟಡ ಕಾರ್ಯಾರಂಭ - ಮಾಡಿ ಯಾವಾಗ ಪೂರ್ಣಗೊಳಿಸಲಾಗುವುದು?

3. ಈ ಕಟ್ಟಡಗಳನ್ನು ಪೂರ್ಣಗೊಳಿಸಿ ಬಡ ಜನರಿಗೆ ಯಾವಾಗ ವಿತರಿಸಲಾಗುವುದು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

1) ಸ್ಥಳಾಭಾವದಿಂದ ಮನೆಕಟ್ಟಿ ಪೂರ್ಣಗೊಳಿಸಲು ವಿಳಂಬವಾಗಿದೆ.

2) ಆಶ್ರಯ ಯೋಜನೆಯಡಿಯಲ್ಲಿ 72 ಜನರಿಗೆ ಮಾತ್ರ ಇಲ್ಲಿ ಮನೆ ಕಟ್ಟಲು ಸಾಧ್ಯವಿದೆ. ಉಳಿದವರಿಗೆ ಸೂಕ್ತ ನಿವೇಶನಗಳು ಅಭಿವೃದ್ಧಿ ಪಡಿಸಿದ ನಂತರ ಆಶ್ರಯ ಯೋಜನೆ ಸಮಿತಿ ಒಪ್ಪಿಗೆ ಪಡೆದು ಕೆಲಸವನ್ನು ತೆಗೆದುಕೊಳ್ಳಲಾಗುವುದು.

3) ಪೂರ್ಣಗೊಂಡ ಮನೆಗಳನ್ನು ಶೀಘ್ರವಾಗಿ ವಿತರಿಸಲಾಗುವುದು. ಉಳಿದ ಜನರಿಗೆ ಆಶ್ರಯ ಯೋಜನೆ ಸಮಿತಿ ಒಪ್ಪಿಗೆ ಪಡೆದು ಕ್ರಮ ತೆಗೆದು ಕೊಳ್ಳಲಾಗುವುದು.

ವಿಷಯ : ಕೊಡಗಿನಲ್ಲಿ ಜೇನು ವ್ಯವಸಾಯದ ಪ್ರಗತಿ

1442 (1946)-ಶ್ರೀ ಡಿ. ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಡಗಿನಲ್ಲಿ ಜೇನು ವ್ಯವಸಾಯದ ಪ್ರಗತಿಯ ಬಗ್ಗೆ ಕೇಂದ್ರ ಸರ್ಕಾರವು ಫೆಡರೇಷನ್‌ನ್ನು ಸ್ಥಾಪಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಈ ಫೇಡರೇಷನ್‌ನ ರಚನೆಯ ಪೂರ್ಣ ಮಾಹಿತಿ ನೀಡುವುದು?

ಶ್ರೀ ಬಿ. ಎ. ಮೊಹ್ಡೀನ್ *(ಸಣ್ಣ ಕೈಗಾರಿಕಾ ಸಚಿವರು)*

ಅ) ಕೊಡಗಿನಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಯಾವ ವಿಧಾವಾದ ಫೆಡರೇಷನ್‌ನ್ನು ಸ್ಥಾಪಿಸಿರುವುದಿಲ್ಲ. ಆದರೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ರಾಜ್ಯದಲ್ಲಿ ಇರುವ ಜೇನು ಕೃಷಿ ಸಹಕಾರಿ ಸಂಸ್ಥೆಗಳನ್ನು ಹಾಗೂ ಇತರೆ ಸಂಘ ಸಂಸ್ಥೆಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ಜೇನು ಕೃಷಿಕರ ಒಕ್ಕೂಟವನ್ನು ಸ್ಥಾಪಿಸಲಾಗಿದೆ.

ಆ) ಕೇಂದ್ರ ಸರ್ಕಾರವು ಫೆಡರೇಷನ್ ಸ್ಥಾಪಿಸಿರುವುದಿಲ್ಲ. ಆದರೆ ಕರ್ನಾಟಕ ರಾಜ್ಯ ಜೇನು ಕೃಷಿಕರ ಒಕ್ಕೂಟವೆಂಬ ಸಂಸ್ಥೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ಸ್ಥಾಪಿಸಲಾಗಿದೆ. ಈ ಒಕ್ಕೂಟವನ್ನು ಸಂಘಗಳ ನೋಂದಣಿ ಅಧಿನಿಯಮ 1960ರ ಪ್ರಕಾರ ನೋಂದಣಿ ಮಾಡಲಾಗಿದೆ.

ವಿಷಯ : ರಾಜ್ಯದಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆ.

1443 (1974)-ಶ್ರೀ ಮಂಜುನಾಥ ಸಿ. ಕನ್ನೂರ್ (ಶಿಗ್ಗಾಂವ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಇಲಾಖೆಯಿಂದ ಎಷ್ಟು ಶಾಶ್ವತ ಕುಡಿಯುವ ನೀರಿನ ಯೋಜನೆ ತೆಗೆದುಕೊಳ್ಳಲಾಗಿದೆ. (ವರ್ಷಾವಾರು ವಿವರ ನೀಡುವುದು)

ಆ) ಪ್ರತಿ ಯೋಜನೆಯ ಪಟ್ಟಣಗಳ ಹಳ್ಳಿಯ ಜನರಸಂಖ್ಯೆ ಎಷ್ಟು? (ಮಾಹಿತಿ ನೀಡುವುದು)

ಇ) ಇದಕ್ಕಾಗಿ ತಗಲಿದ ಖರ್ಚು ಎಷ್ಟು? ಎಷ್ಟು ಕೆಲಸ ಮುಗಿದಿದೆ.

ಈ) ಈಗ ಎಷ್ಟು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಉ) ಯಾವ ಆಧಾರದ ಮೇಲೆ ಸದರಿ ಯೋಜನೆಗಳ ಕಾರ್ಯ ಮಾಡಲಾಗುತ್ತಿದೆ.

ಊ)ಶಿಗ್ಗಾಂವ ಸವಣೂರು, ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆ ಕೆಲಸ ಯಾವ ಹಂತದಲ್ಲಿದೆ?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)